# ಡಿಸೆಂಬರ್‌ನಲ್ಲಿ ಪ್ರಜಾತೀರ್ಪು ಕಾರ್ಯಕ್ರಮ

ಧಾರವಾಡ, ಜು. 20: ರೈತರಿಗೆ ಅಗತ್ಯವಾಗಿರುವ ಸಂಶೋಧನೆ ನೇಪಥ್ಯಕ್ಕೆ ಸರಿದು ಬಹುರಾಷ್ಟ್ರೀಯ ಕಂಪೆನಿಗಳ ಹಿತಕಾಯುವ ಸಂಶೋಧನೆಗಳೇ ಕೃಷಿ ಸಂಶೋಧನಾ ವಲಯದಲ್ಲಿ ಮೇಲುಗೈ ಸಾಧಿಸುತ್ತವೆ ಎಂದು ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ನಿರ್ದೇಶಕ ಪಿ.ವಿ. ಸತೀಶ ಹೇಳಿದರು.

ನಗರದಲ್ಲಿ ಸೋಮವಾರ ಕರೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ದೇಶದ ವ್ಯವಸಾಯ ಕ್ಷೇತ್ರದ ಮುನ್ನಡೆಗೆ ತಾನೇ ಕಾರಣ ಎಂದು ಹೇಳಿಕೊಳ್ಳುತ್ತಿರುವ ಸಂಶೋಧನಾ ರಂಗವು ಹಸಿರು ಕ್ರಾಂತಿಯಿಂದ ಭಾರತೀಯ ಕೃಷಿ ರಂಗದ ಮೇಲಾಗಿರುವ ವ್ಯತಿರಿಕ್ತ ಪರಿಣಾಮಗಳ ಹೊಣೆ ಹೊತ್ತುಕೊಳ್ಳಲು ನಿರಾಕರಿಸುತ್ತಿದೆ ಎಂದರು.

ಇಂದು ಒಂದೆಡೆ ಕೃಷಿ ರಂಗದ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದರೆ, ಇನ್ನೊಂದೆಡೆ ಕೃಷಿ ಸಂಶೋಧನಾ ವಲಯ ಬಹುರಾಷ್ಟ್ರೀಯ ಕಂಪೆನಿಗಳ ಆಣತಿಯಂತೆ ನಿರ್ದೇಶಿಸಲ್ಪಡುತ್ತಿದೆ. ಇದರಿಂದಾಗಿ ಕೃಷಿ ಸಂಶೋಧನೆಗಳು ಜೈವಿಕ ತಂತ್ರಜ್ಞಾನ ಮತ್ತು ಕುಲಾಂತರಿ ತಂತ್ರಜ್ಞಾನದತ್ತ ವಾಲತೊಡಗಿವೆ. ಇಂತಹ ಸಂಶೋಧನೆಗಳು ಹೆಚ್ಚು ಬಂಡವಾಳ ಮತ್ತು ಹೆಚ್ಚು ಬಾಹ್ಯ ಒಳಸುರಿಗಳ ಅಗತ್ಯವಿರುವ ಮಣ್ಣಿನ ಆರೋಗ್ಯ ಮತ್ತು ಜೀವವೈವಿಧ್ಯಕ್ಕೆ ಮಾರಕವಾಗಿವೆ. ಕೃಷಿ ಪದ್ಧತಿಯನ್ನು ನಮ್ಮ ರೈತರ ಮೇಲೆ ಹೇರುವುದರಿಂದ ನಮ್ಮ ಕೃಷಿ ರಂಗ ಇನ್ನಷ್ಟು ಅತಂತ್ರಗೊಳ್ಳುವ ಭೀತಿ ಎದುರಾಗಿದೆ ಎಂದವರು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣದ ಬಗ್ಗೆ ಜಗತ್ತಿನ ವಿವಿಧೆಡೆ ಇಂದು ಚಿಂತನೆಗಳು ಶುರುವಾಗಿವೆ. ರೈತರ ಅನುಭವ, ಅವರಲ್ಲಿರುವ ವಿಶೇಷ ಜ್ಞಾನ, ಅವರ ಅನುಶೋಧನೆಗಳು ಮುಂಚೂಣಿಗೆ ಬರಬೇಕು, ಕೃಷಿ ಸಂಶೋಧನಾ ವ್ಯವಸ್ಥೆ ಹೆಚ್ಚು ಪಾರದರ್ಶಕವಾಗಿರಬೇಕು, ಧನಿವಂತರ, ಸಣ್ಣ ಹಾಗೂ ಮಧ್ಯಮ ರೈತರ ಅಗತ್ಯ ಆಶೋತ್ತರಗಳಿಗೆ ಸಂಶೋಧನಾ ರಂಗ ಸ್ಪಂದಿಸಬೇಕು ಎಂಬ ಪ್ರತಿಪಾದನೆಯೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂಟರ್‌ನ್ಯಾಷನಲ್ ಅಸೆಸ್‌ಮೆಂಟ್ ಆಫ್ ಅಗ್ರಿಕಲ್ಚರಲ್ ನೋಲೆಡ್ಜ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಫಾರ್ ಡೆವಲಪ್‌ಮೆಂಟ್ ಎಂಬ ವೇದಿಕೆ ರೂಪುಗೊಂಡಿದೆ.

ದಕ್ಷಿಣ ಏಷ್ಯಾಕ್ಕೆ ಸಂಬಂಧಿ ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ನೇತೃತ್ವದಲ್ಲಿ 'ಆದರ್ಶ' (ಡೆಮೊಕ್ರಾಸ್ಟಿಂಗ್ ಅಗ್ರಿಕಲ್ಚರಲ್ ರಿಸರ್ಚ್ ಇನ್ ಸೌಥ್ ಏಷ್ಯಾ) ಕೂಟ ರಚನೆಯಾಗಿದ್ದು, ಇದರ ಆಶ್ರಯದಲ್ಲಿ ಡಿಸೆಂಬರ್ ತಿಂಗಳಲ್ಲಿ ಪ್ರಜಾತೀರ್ಪು ಎಂಬ ವಿಶಿಷ್ಟ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಹೇಳಿದರು.

ಇದರಲ್ಲಿ ರೈತರೇ ತೀರ್ಪುಗಾರರು, ರೈತರನ್ನೇ ಸಂಶೋಧನೆಯಲ್ಲಿ ಮುಖ್ಯವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವುದು ಇದರ ಉದ್ದೇಶ ಎಂದರು. ಆಂಧ್ರಪ್ರದೇಶದ ಮೇದಕ್ ಜಿಲ್ಲೆಯಲ್ಲಿ ಇಂತಹ ಅಲ್ಗೋಲ್ ಎಂಬ ಗ್ರಾಮದಲ್ಲಿ ಇಂತಹುದೇ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೃಷಿ ಮಾಧ್ಯಮ ಕೇಂದ್ರದ ನಿರ್ದೇಶಕ ಶ್ರೀಮತಿ ಅನಿತಾ ಪೈಲೂರ, ಅಪ್ಪಿಕೊ ಚಳವಳಿಯ ಮುಖಂಡ ಪಾಂಡುರಂಗ ಹೆಗಡೆ ಉಪಸ್ಥಿತರಿದ್ದರು.